ಲಿಖಿತ ಮೂಲಕ ಉತ್ತರಿಸುವ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಬುಧವಾರ, ದಿನಾಂಕ : 04 ನೇ ಮಾರ್ಚ್, 2020

ಮುಜರಾಯಿ ಇಲಾಖೆಗೆ ಒಳಪಡುವ ದೇವಾಲಯಗಳಲ್ಲಿ ಸಾಮೂಹಿಕ ವಿವಾಹದ ಬಗ್ಗೆ

ಶ್ರೀ ಕಾಂತರಾಜ್ (ಬಿಎಂಎಲ್):- (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

194 (295) ಮಾನ್ಯ ಮುಜರಾಯಿ ಹಾಗೂ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಮುಜರಾಯಿ ಇಲಾಖೆಗೆ ಒಳಪಡುವ ದೇವಾಲಯಗಳಲ್ಲಿ ಸರ್ಕಾರದ ವತಿಯಿಂದ ಸಾಮೂಹಿಕ ವಿವಾಹದ ಯೋಜನೆಯನ್ನು ಜಾರಿಗೆ ತರಲಾಗಿದೆಯೇ; (ವಿವರ ನೀಡುವುದು)

(ಆ) ಸರ್ಕಾರದ ವತಿಯಿಂದ ಸಾಮೂಹಿಕ ವಿವಾಹದ ಯೋಜನೆ ಏರ್ಪಡಿಸುವ ಚಿಂತನೆ ಸ್ವಾಗತಾರ್ಹ ಕಾರ್ಯಕ್ರಮವಾಗಿರುವುದರಿಂದ ಈ ವನ ಜೋಡಿಗಳ ಆರ್ಥಿಕ ಸ್ವಾವಲಂಭನೆಗೆ ಸ್ವ-ಉದ್ಯೋಗ ಯೋಜನೆಯ ಕಾರ್ಯಕ್ರಮ ರೂಪಿಸಲಾಗುವುದೇ; (ವಿವರ ನೀಡುವುದು)

(ಇ) ಮುಜರಾಯಿ ಇಲಾಖೆಯ ದೇವಾಲಯಗಳಲ್ಲಿ ಮದುವೆಯಾಗುವ ಜೋಡಿಗಳಿಗೆ ಸರ್ಕಾರದಿಂದ ನೀಡುವ ಅನುಕೂಲಗಳೇನು;

(ಈ) ವರ್ಷದಲ್ಲಿ ಎಷ್ಟು ಸಲ ಈ ರೀತಿಯ ಸಾಮೂಹಿಕ ವಿವಾಹಗಳನ್ನು ಏರ್ಪಡಿಸಲಾಗಿದೆ;

(ಉ) ಕನಿಷ್ಠ ಪಕ್ಷ ಪ್ರತಿ ಹೋಬಳಿ ಮಟ್ಟದಲ್ಲಿ ಮುಜರಾಯಿ ಇಲಾಖೆಯ ಎರಡು ಅಥವಾ ಖಾಸಗಿ ದೇವಸ್ಥಾನಗಳಲ್ಲಿ ತಲಾ 100 ಜೋಡಿಯ ಸಾಮೂಹಿಕ ವಿವಾಹವನ್ನು ವರ್ಷದಲ್ಲಿ 2 ಬಾರಿ ಮಾಡುವ ಕಾರ್ಯಕ್ರಮವನ್ನು ಸರ್ಕಾರ ರೂಪಿಸಿದ್ದಲ್ಲಿ ಸಾರ್ವಜನಿಕರಿಗೆ ತುಂಬಾ ಅನುಕೂಲವಾಗುವುದಿಲ್ಲವೆ; ಸರ್ಕಾರ ಈ ಬಗ್ಗೆ ಯೋಜನೆ ಜಾರಿಗೆ ತರುವುದೇ?